ಕರ್ನಾಟಕ ಸರ್ಕಾರ

ಸಂಖ್ಯೆ ಆನಾಸ 307 ಆಇಸೇ 2001

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 22-02-2002.

## ಸುತ್ತೋಲೆ.

ವಿಷಯ: ಸರ್ಕಾರದ ಇಲಾಖೆಗಳಲ್ಲಿ ಭೂ ವಿಸ್ತೀರ್ಣವನ್ನು ಮೆಟ್ರಿಕ್ ಪದ್ಧತಿಯಲ್ಲಿ ದಾಖಲಿಸದಿರುವ ಬಗ್ಗೆ.

ಉಲ್ಲೇಖ : ಸಂಖ್ಯೆ ಆನಾಸ 55 ಎಲ್ ಎಂ ಇ 98 , ದಿನಾಂಕ 18-08-98 ರ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸುತ್ತೋಲೆ.

---X---

ಉಲ್ಲೇಖಿತ ಸುತ್ತೋಲೆಯಲ್ಲಿ 1985 ರಿಂದ ಪ್ರಮಾಣಬದ್ಧ ತೂಕ ಮತ್ತು ಅಳತೆ (ಅಮಲುಜಾರಿಕಾಯ್ದೆ) ಪ್ರಕರಣ 11ರ ಪ್ರಕಾರ ಮೆಟ್ರಿಕ್ ಪದ್ಧತಿಯಲ್ಲದ ಪದ್ಧತಿಯಲ್ಲಿ ಭೂಮಿ ವಿಸ್ತೀರ್ಣವನ್ನು ದಾಖಲಿಸುವುದು ನಿಯಮಬಾಹಿರವಾದ ಕ್ರಮವಾಗಿರುತ್ತದೆಂದು ಈಗಾಗಲೇ ತಿಳಿಸಲಾಗಿದೆ. ಆದರೂ ಅನೇಕ ಸರ್ಕಾರಿ ಇಲಾಖೆಗಳು ಉದಾಹರಣೆಗೆ ನಗರಾಭಿವೃದ್ಧಿ ಇಲಾಖೆ, ವಸತಿ ಇಲಾಖೆ, ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆ, ಅರಣ್ಯ ಇಲಾಖೆ, ಪಂಚಾಯತ ಇಲಾಖೆ, ಇನ್ನೂ ಮುಂತಾದ ಇಲಾಖೆಗಳು ವಸತಿ ನಿವೇಶನಗಳು, ಭೂಮಿ ಇತ್ಯಾದಿಗಳ ವಿಸ್ತೀರ್ಣವನ್ನು ಅಡಿ, ಇಂಚು, ಎಕರೆ ಮತ್ತು ಗುಂಟೆಗಳಲ್ಲಿ ನಮೂದಿಸಿಕೊಂಡು ಹಳೆಯಪದ್ಧತಿಯಲ್ಲಿ ಅಂದರೆ ಬ್ರಿಟಿಷ್ ಪದ್ಧತಿಯಲ್ಲಿ ದಾಖಲಿಸುತ್ತಿರುವುದು ಕಂಡು ಬಂದಿದೆ. ಅಲ್ಲದೆ ಹಳೆಯ ಪದ್ಧತಿಯನ್ನೇ ಉಪಯೋಗಿಸಿಕೊಂಡು ಪತ್ರಿಕೆಗಳಲ್ಲಿ, ರಾಜ್ಯಪತ್ರಗಳಲ್ಲಿ ಪ್ರಕಟಣೆ ಮಾಡುತ್ತಿರುವುದು ಸಹ ಕಂಡು ಬಂದಿದೆ. ಈ ರೀತಿಯ ಪ್ರಕಟಣೆಗಳು ಸ್ಟ್ಯಾಂಡರ್ಡ್ ಪದ್ಧತಿಗೆ ವಿರುದ್ಧವಾಗಿದೆ. 1985ರ ತೂಕ ಮತ್ತು ಅಳತೆ( ಅಮಲ್ಜಾರಿ) ಕಾಯ್ದೆ ಪ್ರಕರಣ 11ರ ಉದ್ಧೃತ ಮತ್ತು 1976ರ ಸ್ಟ್ಯಾಂಡರ್ಡ್ ಆಫ್ ವೈಟ್ಸ್ ಮತ್ತು ಮೆಷರ್ಸ್ ಕಾಯ್ದೆಯ ಪ್ರಕರಣ 79ರ ಉದ್ಧೃತಿಯನ್ನು ಈ ಸುತ್ತೋಲೆಯಲ್ಲಿ ಮಾಹಿತಿಗಾಗಿ ಲಗತ್ತಿಸಲಾಗಿದೆ.

ಮೇಲ್ಕಂಡ ಅಧಿನಿಯಮಗಳ ಪ್ರಕರಣಗಳ ಪ್ರಕಾರ ಮೆಟ್ರಿಕ್ ಪದ್ಧತಿಯಲ್ಲದ ಪದ್ಧತಿಯಲ್ಲಿ ಭೂಮಿ ವಿಸ್ತೀರ್ಣ ತೂಕ ಮತ್ತು ಅಳತೆಗಳನ್ನು, ದಾಖಲಾತಿಗಳನ್ನು, ನಮೂದು ಮಾಡುವವರಿಗೆ ರೂ.2000 ಗಳವರೆಗೆ ದಂಡ ಮತ್ತು ಒಂದು ವರ್ಷದವರೆಗೆ ಸಜೆಯನ್ನು ವಿಧಿಸಬಹುದಾಗಿರುತ್ತದೆ.

ಆದುದರಿಂದ ಎಲ್ಲಾ ಸರ್ಕಾರಿ ಇಲಾಖೆಗಳು ತೂಕ ಅಳತೆ ಇತ್ಯಾದಿಗಳನ್ನು ದಾಖಲಿಸುವ ಸಮಯದಲ್ಲಿ ಮೆಟ್ರಿಕ್ ಪದ್ಧತಿಯನ್ನು ಮಾತ್ರ ಅನುಸರಿಸತಕ್ಕದೆಂದು ಈ ಮೂಲಕ ಸೂಚಿಸಲಾಗಿದೆ. ಈ ವಿಷಯದಲ್ಲಿ ಅಧೀನ ಇಲಾಖೆ/ ಕಾರ್ಯಾಲಯಗಳಿಗೆ ಅಗತ್ಯ ಸೂಚನೆಗಳನ್ನು ನೀಡತಕ್ಕದೆಂದು ಮತ್ತು ಅಂತಹ ಸೂಚನೆಯ ಪ್ರತಿಯನ್ನು ಈ ಇಲಾಖೆಗೆ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖಾ ನಿಯಂತ್ರಕರಿಗೆ ಕಳುಹಿಸಲು ಈ ಮೂಲಕ ಕೋರಿದೆ.

-ಸಹಿ-
( ಹೆಚ್ ಎಸ್ ಉದಯಶಂಕರ)
ಸರ್ಕಾರದ ಅಧೀನ ಕಾರ್ಯದರ್ಶಿ ,
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ.

ಕ್ರ.ಕಾಂತ್ರೈಕ.ಸುತ್ತೋಲೆ.1/2001-02

ದಿನಾಂಕ 26-03-2002.

1. ಪ್ರತಿಯನ್ನು ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ ರವಾನಿಸಿದೆ.

ನಿರ್ದೇಶಕರ ಪರವಾಗಿ
ಭೂಮಾಪನ ಕಂದಾಯ ವ್ಯವಸ್ಥೆ